**ಅಸಲು ದಾವ ಸಂಖ್ಯೆ: 1256/2022**

**ಪಿ.ಡಬ್ಲೂ -1**

**ದಿ:14-10-2025 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ CRN ರವರಿಂದ:-**

1. ನಿಪಿ-2 ರಿಂದ ನಿಪಿ-4 ರ ದಾಖಲೆಗಳಲ್ಲಿ ತೋರಿಸಿರುವ ಆಸ್ತಿಗಳು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುವುದಿಲ್ಲ. ದಾವಾ ಆಸ್ತಿಯಾದ ಆರ್ ಎಸ್ ನಂಬರ 97/2 ರ ಸ್ವತ್ತು ನಮ್ಮ ಹಿರಿಯರ ಸ್ವತ್ತು ಎಂದು ತೋರಿಸಲು ನನ್ನ ಮೌಖಿಕ ಹೇಳಿಕೆ ಹೊರತುಪಡಿಸಿ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. 2ನೇ ಪ್ರತಿವಾದಿಯು ನಮ್ಮ ತಂದೆ ಲಕ್ಷ್ಮಣ ಉಪರಿ ರವರ ಹೆಸರಿಗೆ ಒಂದು ದಾಖಲೆ ಬರೆದುಕೊಟ್ಟಿರುತ್ತಾರೆ ಎಂದು ನಾನು ವಾದಪತ್ರದ 7ನೇ ಖಂಡಿಕೆಯಲ್ಲಿ ಬರೆದಿದ್ದು, ಸದರಿ ದಾಖಲೆಯನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸದರಿ ದಾಖಲೆ ಯಾವುದು ಹಾಗೂ ಅದು ಯಾವ ಇಸವಿಯಲ್ಲಿ ಬರೆದುಕೊಟ್ಟಿದ್ದರು ಎಂದು ನಾನು ನನ್ನ ವಾದಪತ್ರದಲ್ಲಿ ಬರೆದಿರುತ್ತೀನಾ ಎಂದರೆ ಸಾಕ್ಷಿ ತನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಅದರ ವಿವರಗಳನ್ನು ನಾನು ವಾದಪತ್ರದಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಆರ್ ಎಸ್ ನಂಬರ 97/2 ರಲ್ಲಿ ಎರಡು ಉಪವಿಭಾಗ/ಪೋಟ ಹಿಸ್ಸಾ ಇದ್ದು ತಲಾ 1-ಎಕರೆ 15-ಗುಂಟೆಯ ಒಂದು ಪೋಟ ಹಿಸ್ಸಾ ಇರುತ್ತದೆ. ನನ್ನ ವಾದಪತ್ರದಲ್ಲಿ ಸದರಿ ಪೋಟ ಹಿಸ್ಸೆಯ ಬಗ್ಗೆ ನಾನು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಈಗನಾನು ಸರ್ವೆ ನಂಬರ 97/2 ರ ಪಹಣಿ ಪತ್ರ ನೋಡುತ್ತಿದ್ದು, 2007 ನೇ ಇಸವಿಯಲ್ಲಿ ಸದರಿ ಆಸ್ತಿಯನ್ನು ನನ್ನ ತಂದೆ ಲಕ್ಷ್ಮಣ ಉಪರಿ ಅಲಿಯಾಸ ಕೋಸ್ಟೆ ರವರು ಖರೀದಿ ಮಾಡಿದ ಪ್ರಕಾರ ಅವರ ಹೆಸರು ಪಹಣಿ ಪತ್ರಿಕೆಯಲ್ಲಿ ಬಂದಿರುತ್ತದೆ ಎಂದರೆ ಸರಿ. ಸಾಕ್ಷಿ ಸದರಿ ಪಹಣಿ ಪತ್ರವನ್ನು ನೋಡಿ ಒಪ್ಪಿದ ಕಾರಣ ಅದನ್ನು ನಿಡಿ-7 ಎಂದು ಗುರುತಿಸಲಾಯಿತು. ಸದರಿ

ಪಹಣಿ ಪತ್ರಿಕೆಯ ಪ್ರಕಾರ 2ನೇ ಪುಟದಲ್ಲಿ ದಿಃ 10-02-2004 ರ ಕ್ರಯ ಪತ್ರದ ಪ್ರಕಾರ ನನ್ನ ತಂದೆಯ ಹೆಸರು ನಿಡಿ-7 ಪಹಣಿ ಪತ್ರಿಕೆಯಲ್ಲಿ ನಮೂದಾಗಿರುತ್ತದೆ ಎಂದರೆ ಸರಿ. ಅದೇ ರೀತಿ ನಿಡಿ-7 ರ 3ನೇ ಪುಟದಲ್ಲಿ ಸರ್ವೆ ನಂಬರ 97/2 ರಲ್ಲಿ ತಲಾ 3-ಗುಂಟೆಯಂತೆ ಎರಡು ಸಲ ಕರ್ನಾಟಕ ನೀರಾವರಿ ನಿಗಮ ನಿಯಮಿತ ರವರು ಭೂಸ್ವಾಧೀನ ಮಾಡಿರುತ್ತಾರೆ ಎಂದು ನಮೂದು ಇರುತ್ತದೆ ಎಂದರೆ ಸರಿ. ಸದರಿ ಕರ್ನಾಟಕ ನೀರಾವರಿ ನಿಗಮ ನಿಯಮಿತ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸರ್ವೆ ನಂಬರ 97/2 ರ ಸ್ವತ್ತು ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದು ನನಗೆ ತಿಳಿದಿದ್ದರೂ ಸಹ 1ನೇ ಪ್ರತಿವಾದಿ ಎಂದರೆ ನನ್ನ ಸಹೋದರನಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಅವರ ವಿರುದ್ಧ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸಾಕ್ಷಿ 1ನೇ ಪ್ರತಿವಾದಿಯು ಮೋಸ ಮಾಡಿ ದಾವಾ ಆಸ್ತಿಯನ್ನು ತನ್ನ ಹೆಸರಿಗೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

2. ನನ್ನ ತಂದೆ ಲಕ್ಷ್ಮಣ ಉಪರಿ ರವರ ಮಾನಸಿಕ ಸ್ಥಿತಿ ಸರಿಯಾಗಿ ಇರಲಿಲ್ಲ ಎಂದು ತೋರಿಸಲು ನಾನು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**